ತಿಪ್ಪಗೊಂಡನಹಳ್ಳಿಗೆ ಸೇರಿದ ಜಮೀನನ್ನು ಪಡೆಯಲು ಬಂದಿರುವ ಅರ್ಜಿಗಳು.

೧೫೪೪. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಿಪ್ಪಗೊಂಡನಹಳ್ಳಿಗೆ ಸೇರಿದ ಒಟ್ಟು ಜಮೀನಿನ ವಿಸ್ತೀರ್ಣವೆಷ್ಟು (ಕೆರೆಯ ಜಮೀನಿನ ವಿಸ್ತೀರ್ಣವು ಸೇರಿದಂತೆ ನೀಡುವುದು)

ಆ) ಈ ಜಮೀನನ್ನು ಪಡೆಯಲು ಎಷ್ಟು ಸಂಘ ಸಂಸ್ಥೆಗಳಿಂದ ಬೇಡಿಕೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಬೇಡಿಕೆ ಬಂದ ಎಲ್ಲಾ ಸಂಘ ಸಂಸ್ಥೆಗಳ ವಿವರವನ್ನು ನೀಡುವುದು)

ಇ) ಸದರಿ ಬೇಡಿಕೆಯಲ್ಲಿ ಹರಿಜನ ಗಿರಿಜನ ಸಂಘ ಸಂಸ್ಥೆಗಳಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಈ) ಸದರಿ ಜಮೀನಿನ ಬೇಡಿಕೆಯ ಬಗ್ಗೆ ತಹಲಿಯ ನಾಗರಿಕರಿಂದ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

ಉ) ತಿಪ್ಪಗೊಂಡನಹಳ್ಳಿಗೆ ಸಂಬಂಧಪಟ್ಟ ಜಾಗವನ್ನು ಬೇರೆಯವರಿಗೆ ಪರಾಧೀನ ಮಾಡುವ ಅಥವಾ ಬಡಜನರಿಗಾಗಿ ಮೀಸಲಾಗಿಡುವ ಉದ್ದೇಶವಿದೆಯೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು).—

ಅ) ತಿಪ್ಪಗೊಂಡನಹಳ್ಳಿ ಕೆರೆಯ ಜಮೀನೂ ಸೇರಿದರೆ ತಿಪ್ಪಗೊಂಡನಹಳ್ಳಿ ಗ್ರಾಮದ ಒಟ್ಟು ವಿಸ್ತೀರ್ಣ ೪೮೪ ಎಕರೆ ೩೦ ಗುಂಟೆ. ಇದರಲ್ಲಿ ೩೬೮-೨೧ ಎಕರೆ ಸರ್ಕಾರಿ ಜಮೀನು ಮುಳುಗಡೆಯಾಗಿರುತ್ತದೆ. ೭೨-೦೮ ಎಕರೆ ಹಿಡುವಳಿ ಜಮೀನಾಗಿರುತ್ತದೆ. ಇದರಲ್ಲಿ ೫೫-೨೦ ಗುಂಟೆ ಜಮೀನನ್ನು ೧೫೫೯-೬೪ರಲ್ಲಿ ೩ ಜನರಿಗೆ ಮಂಜೂರು ಮಾಡಲಾಗಿದೆ. ಉಳಿದ ೩೯-೧೧ ಎಕರೆ ಪ್ರದೇಶದಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ೩೬೦ ವಸತಿ ಗೃಹಗಳು ನಿರ್ಮಿಸಲಾಗಿವೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ

ಈ) ಉದ್ಭವಿಸುವುದಿಲ್ಲ

ಉ) ತಿಪ್ಪಗೊಂಡನಹಳ್ಳಿ ಗ್ರಾಮದಲ್ಲಿ ಕಂದಾಯ ಇಲಾಖೆಗೆ ಸೇರಿದ ಜಮೀನು ಇರುವುದಿಲ್ಲ. ಹಿಂದೆ ಇದ್ದ ಗೋಮಾಳದ ಜಮೀನು ತಿಪ್ಪಗೊಂಡನಹಳ್ಳಿ ಜಲಾಯನ ಪ್ರದೇಶದಲ್ಲಿ ಮುಳುಗಡೆಯಾಗಿರುತ್ತದೆ. ಆದ್ದರಿಂದ ಬೇರೆಯವರಿಗೆ ಪರಭಾರೆ ಮಾಡುವ ಅಥವಾ ಬಡಜನರಿಗೆ ಮೀಸಲಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಕರ್ನಾಟಕದಲ್ಲಿರುವ ಅಂಗನವಾಡಿಗಳು.

೧೪೬೬. ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ). —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ರಾಜ್ಯದಲ್ಲಿ ಎಷ್ಟು ಅಂಗನವಾಡಿಗಳಿವೆ ಮತ್ತು ಒಂದು ಅಂಗನವಾಡಿಗೆ ಖರ್ಚಾಗುವ ಹಣವೆಷ್ಟು ?

೨) ಈ ಹಣವನ್ನು ಕೇಂದ್ರ ಸರ್ಕಾರದಿಂದ ಪಡೆಯುತ್ತಿರೋ ಅಥವಾ ರಾಜ್ಯ ಸರ್ಕಾರದವರು ಕೊಡುತ್ತಿರುವರೇ ?

೩) ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಅಂಗನವಾಡಿಗಳಿವೆ ಹಾಗೂ ಸಿರ್ಸಿ, ಸಿದ್ದಾಪುರ ತಾಲ್ಲೂಕಿನಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು?

೪) ಈ ಅಂಗನವಾಡಿಗಳಲ್ಲಿ ನೌಕರಿ ಮಾಡುತ್ತಿರುವವರನ್ನು ಖಾಯಂ ಮಾಡಲು ಸರ್ಕಾರವು ಉದ್ದೇಶಿಸಿದೆಯೆ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

೧) ರಾಜ್ಯದಲ್ಲಿ ೧೪,೫೪೪ ಅಂಗನವಾಡಿಗಳಿವೆ. ಒಂದು ಅಂಗನವಾಡಿಗೆ ವರ್ಷ ಒಂದಕ್ಕೆ ಸುಮಾರು ರೂ. ೨೫,೫೦೦ ಗಳು ಖರ್ಚಾಗುತ್ತವೆ.

೨) ರಾಜ್ಯ ವಲಯದ ೩೦ ಯೋಜನೆಗಳ ಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ. ಕೇಂದ್ರ ವಲಯದಲ್ಲಿನ ೬೪ ಯೋಜನೆಗಳಿಗೆ ತಗಲುವ ಖರ್ಚಿನಲ್ಲಿ ೨:೩ ಭಾಗವನ್ನು ಅಂದರೆ ಪೂರಕ ಪೌಷ್ಟಿಕ ಆಹಾರಕ್ಕಾಗಿ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರವು ಉಳಿದ ೧:೩ ಭಾಗ ಅಂದರೆ ಆಡಳಿತಾತ್ಮಕ ವೆಚ್ಚವನ್ನು ಕೇಂದ್ರ ಸರ್ಕಾರವು ಭರಿಸುತ್ತಿದೆ.

೩) ಉತ್ತರ ಕನ್ನಡ ಜಿಲ್ಲೆಯಲ್ಲಿನ ೪ ತಾಲ್ಲೂಕುಗಳಲ್ಲಿ ಒಟ್ಟು ೩೭೭ ಅಂಗನವಾಡಿ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ.

ಸಿರ್ಸಿ, ಸಿದ್ದಾಪುರ ತಾಲ್ಲೂಕುಗಳಿಗೆ ಸಮಗ್ರ ಬಾಲವಿಕಾಸ ಯೋಜನೆಯು ಇನ್ನು ಮಂಜೂರಾಗಿಲ್ಲ ದಿರುವುದರಿಂದ ಈ ತಾಲ್ಲೂಕುಗಳಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸಿರುವುದಿಲ್ಲ.

೪) ಇಲ್ಲ.

ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿತ ನಿರುದ್ಯೋಗಿಗಳ ಸಂಖ್ಯೆ.

೧೪೨೧. ಶ್ರೀ ಕೆ. ಪುತ್ತಾಪಚೆಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ವಿವಿಧ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಡೆಯುತ್ತಿರುವ ಅಕ್ರಮಗಳನ್ನು ತಪ್ಪಿಸಲು ಮಹಾರಾಷ್ಟ್ರ ಮಾದರಿಯಲ್ಲಿನ ಗಣಕೀಕರಣವನ್ನು (ಕಂಪ್ಯೂಟರೈಸೇಷನ್) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಪ್ರಾರಂಭಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಎಸ್. ಕೆ. ಕಾಂತಾ (ಕಾರ್ಮಿಕ ಸಚಿವರು).—

ಅ) ಸಾರ್ವಜನಿಕರಿಗೆ ತ್ವರಿತ ಹಾಗೂ ನಿಷ್ಪಕ್ಷಪಾತ ಸೇವೆಯನ್ನು ಒದಗಿಸುವ ಉದ್ದೇಶದಿಂದ, ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯ ಚಟುವಟಿಕೆಗಳನ್ನು ಗಣಕೀಕರಿಸುವ ಯೋಜನೆಯನ್ನು ೧೯೮೫-೮೬ರಲ್ಲಿ ರೂಪಿಸಿಕೊಂಡು ೧೯೮೫ನೇ ಜನವರಿಯಿಂದ ಕಾರ್ಯಗತಕ್ಕೆ ತರಲಾಗಿದೆ. ಈ ವಿಷಯದಲ್ಲಿ ಕರ್ನಾಟಕ ರಾಷ್ಟ್ರದಲ್ಲೇ ಮೊಟ್ಟಮೊದಲನೆಯದಾಗಿದ್ದು ಪ್ರಶಂಸೆಗೆ ಪಾತ್ರವಾಗಿದೆ. ಇದರ ಮಾದರಿಯನ್ನು ಅನುಸರಿಸಲು ಕೇಂದ್ರ ಸರ್ಕಾರವು ಸೇರಿದಂತೆ ಇತರ ರಾಜ್ಯಗಳು ಮುಂದೆ ಬಂದಿರುತ್ತದೆ.

ಈ ಗಣಕೀಕರಣದ ಕಾರ್ಯಕ್ರಮದಡಿಯಲ್ಲಿ ಈಗಾಗಲೇ ಐದು ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯ ಚಟುವಟಿಕೆಗಳನ್ನು ಪೂರ್ಣವಾಗಿ ಗಣಕೀಕರಿಸಲಾಗಿದ್ದು ಮೂರು ಉದ್ಯೋಗ ವಿನಿಮಯ ಕೇಂದ್ರಗಳ ಗಣಕೀಕರಣ ಪ್ರಯತ್ನವು ಪಂತದಲ್ಲಿದೆ. ಉಳಿದ ಉದ್ಯೋಗ ವಿನಿಮಯ ಕೇಂದ್ರಗಳ ಚಟುವಟಿಕೆಗಳನ್ನು ಹಂತ ಹಂತವಾಗಿ ಸಾಧ್ಯ ಸೌಲಭ್ಯ ಅನುಸರಿಸಿ ಗಣಕೀಕರಿಸಲಾಗುವುದು.